ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಬೀಳಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ತೆಗ್ಗಿ–ಸಿದ್ದಾಪೂರ, ಸೊನ್ನ, ರೊಳ್ಳಿ–ಮನ್ನಿಕೇರಿ ಈ ಮೂರು ಏತ ನೀರಾವರಿ ಯೋಜನೆಗಳು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಅಡಿಯಲ್ಲಿ ಕೈಗೊಳ್ಳಲಾಗಿದೆ. ಕರ್ನಾಟಕ ನೀರಾವರಿ ನಿಗಮದಡಿಯಲ್ಲಿ ಘಟಪ್ರಭ ಯೋಜನೆಗೆ ಸೇರಿರುವ (1) ಘಟಪ್ರಭಾ ಎಡದಂಡೆ ಕಾಲುವೆ, (2) ಹಿಪ್ಪರಗಿ ಯೋಜನೆಗೆ ಸೇರಿರುವಂತೆ ಸಾವಳಗಿ–ತುಂಗಳ ಏತ ನೀರಾವರಿ (3) ಬಾವಲತ್ತಿ ಏತ ನೀರಾವರಿ (4) ಗಲಗಲಿ ಬ್ಯಾರೇಜ್.

ಆ) (1) ತೆಗ್ಗಿ–ಸಿದ್ದಾಪೂರ– 3,000 ಹೆ.

(2) ಸೊನ್ನ –1055 ಹೆ.

(3) ರೊಳ್ಳಿ–ಮನ್ನಿಕೇರಿ – 2359 ಹೆ.

ಈ ಮೂರು ಯೋಜನೆಗಳಡಿ ಒಟ್ಟು 6,414 ಹೆಕ್ಟೇರ್ ಪ್ರದೇಶವು ನೀರಾವರಿಗೆ ಒಳಪಟ್ಟಿದೆ.

ಕರ್ನಾಟಕ ನೀರಾವರಿ ನಿಗಮದಡಿ:

1) ಘಟಪ್ರಭಾ ಎಡದಂಡೆ ಕಾಲುವೆಯಡಿ 19,454.58 ಹೆ.

2) ಬಾವಲತ್ತಿ ಏತ ನೀರಾವರಿಯಡಿ – 364.05 ಹೆ.

3) ಗಲಗಲಿ ಬ್ಯಾರೇಜ್ ರಡಿ 614.81 ಹೆ.

4) ಹಿಪ್ಪರಗಿ ಯೋಜನೆಯಡಿ ಸಾವಳಗಿ–ತುಂಗಾಳ್ ಏತ ನೀರಾವರಿ ಮೂಲಕ 4,358 ಹೆ.

ಈ ನಾಲ್ಕು ಯೋಜನೆಗಳಡಿ ಒಟ್ಟು 24,791.44 ಹೆ.

ಇ) ಬೀಳಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಯಾವುದೇ ಹೊಸ ನೀರಾವರಿ ಯೋಜನೆಯ ಪ್ರಸ್ತಾವನೆ ಇರುವುದಿಲ್ಲ.

ಈಉ) ಉದ್ಭವಿಸುವುದಿಲ್ಲ.

1031 (593) ಶ್ರೀ ಪಾಟೀಲ ಎಸ್.ಎಸ್. (ಮುಂಡರಗಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ರಾಜ್ಯದಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಕೊರತೆ ಇರುವ ಶಿಕ್ಷಕರೆಷ್ಟು, ವಿವರ ನೀಡುವುದು; (ದೈಹಿಕ ಶಿಕ್ಷಕರು ವಗೈರೆ);

ಆ) ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು;

ಇ) ಸಂಗೀತ ಶಿಕ್ಷಕರನ್ನು ಸಹ ತುಂಬಲಾಗುವುದೇ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಸರ್ಕಾರಿ ಪ್ರಾಥಮಿಕ:

ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆ ಸಂಖ್ಯೆ:8379 ಇದರಲ್ಲಿ 7753 ಸಾಮಾನ್ಯ ಶಿಕ್ಷಕರು, 559 ದೈಹಿಕ ಶಿಕ್ಷಕರು, 23 ಸಂಗೀತ ಶಿಕ್ಷಕರು, 44 ಚಿತ್ರಕಲೆ ಶಿಕ್ಷಕರು.

ಸರ್ಕಾರಿ ಪ್ರೌಢ:

ರಾಜ್ಯದಲ್ಲಿನ ಸರ್ಕಾರಿ ಪ್ರೌಢಶಾಲೆಗಳಲ್ಲಿ 5955 ಸಹ ಶಿಕ್ಷಕರ ಮತ್ತು 29 ದೈಹಿಕ ಶಿಕ್ಷಕರ ಗ್ರೇಡ್–1 ಹುದ್ದೆಗಳು ಒಟ್ಟು 5984 ಖಾಲಿ ಇರುತ್ತವೆ.

ಸರ್ಕಾರಿ ಪದವಿ ಪೂರ್ವ:

ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 2401 ಉಪನ್ಯಾಸಕರ ಹುದ್ದೆಗಳು ಖಾಲಿ ಇರುತ್ತವೆ. ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ 39 ಹುದ್ದೆಗಳು ಖಾಲಿ ಇರುತ್ತವೆ.

ಆ) ಸರ್ಕಾರಿ ಪ್ರಾಥಮಿಕ:

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ 7753 ಹುದ್ದೆಗಳಿಗೆ ದಿನಾಂಕ:11.01.2007ರಂದು ನೇಮಕಾತಿ ಅಧಿಸೂಚನೆ ಹೊರಡಿಸಲಾಗಿದೆ. ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಶೀಘ್ರವೇ ಭರ್ತಿ ಮಾಡಲಾಗುವುದು.

ಸರ್ಕಾರಿ ಪ್ರೌಢ:

ಈ ಖಾಲಿ ಹುದ್ದೆಗಳನ್ನು ತುಂಬಲು ನೇಮಕಾತಿಗಾಗಿ ದಿನಾಂಕ:25.09.2006ರಂದು ಅಧಿಸೂಚನೆಯನ್ನು ನೀಡಲಾಗಿತ್ತು.

ದಿನಾಂಕ:25/26.11.2006ರಂದು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಸದ್ಯದಲ್ಲೇ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಸರ್ಕಾರಿ ಪದವಿ ಪೂರ್ವ:

ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ 475 ಉಪನ್ಯಾಸಕರ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕ ಸೇವಾ ಆಯೋಗವು ದಿನಾಂಕ:18.08.2006ರಂದು ಪ್ರಕಟಣೆ ನೀಡಿದೆ. ಇನ್ನೂ 803 ಹುದ್ದೆಗಳಿಗೆ ಪ್ರಕಟಣೆ ನೀಡಲು ಸರ್ಕಾರದಿಂದ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ. 595 ಅರ್ಹ ಪ್ರೌಢಶಾಲಾ ಶಿಕ್ಷಕರುಗಳಿಗೆ ದಿನಾಂಕ:23.10.2006ರಲ್ಲಿ ಈಗಾಗಲೇ ಸ್ಥಾನಪನ್ನ ಬಡ್ತಿ ನೀಡಿ ತುಂಬಲಾಗಿದೆ. ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ ಸರ್ಕಾರದ ಆದೇಶದ ದಿನಾಂಕ:12.04.2006ರಂತೆ 282 ಹುದ್ದೆಗಳನ್ನು ತುಂಬಲು ಆರ್ಥಿಕ ಮಿತವ್ಯಯ ಸಡಿಲಿಸಿದೆ ಮತ್ತು 100 ಹುದ್ದೆಗಳನ್ನು ತುಂಬಲು ಅನುಮತಿ ನೀಡಿದೆ.

ಇ) **ಸರ್ಕಾರಿ ಪ್ರಾಥಮಿಕ:**

ದಿನಾಂಕ:01.02.2007ರಂದು 626 ವಿಶೇಷ ಶಿಕ್ಷಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿದ್ದು ಇದರಲ್ಲಿ 23 ಸಂಗೀತ ಶಿಕ್ಷಕರ ಹುದ್ದೆಗಳೂ ಒಳಗೊಂಡಿವೆ.

ಸರ್ಕಾರಿ ಪ್ರೌಢ:

ರಾಜ್ಯದಲ್ಲಿನ ಖಾಲಿ ಇರುವ 68 ಸಂಗೀತ ಶಿಕ್ಷಕರ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಆದನಂತರ ನೇಮಕಾತಿ ಮಾಡಲಾಗುವುದು.

ಸರ್ಕಾರಿ ಪದವಿ ಪೂರ್ವ:

ಹೌದು ತುಂಬಲಾಗುವುದು.

1032 (592) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;